ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
DSERT NO 4, 100 FT RING ROAD, BANASHANKARI 3RD STAGE BENGALURU - 085
Phone: 080 26422372 26422373 26422374 Fax:26422377
E MAIL:dsertkar@gmail.com Website: http://dsert.kar.nic.in

ಸಂ: ಶಿತ1/ಇತರೆ/18/2017-18 ದಿನಾಂಕ: 29/11/2017

# ಪ್ರಕಟಣಾ ವಿಷಯ

ಮಕ್ಕಳ ಶಿಕ್ಷಣ ಖಾಯಿದೆ 2009 ಸೆಕ್ಷನ್ 23(2) ರ ಪ್ರಕಾರ ಶಿಕ್ಷಕರ ತರಬೇತಿ ಪಡೆದ ಶಿಕ್ಷಕರು ಮಾತ್ರ ಶಾಲೆಗಳಲ್ಲಿ ಶಿಕ್ಷಕರಾಗಬೇಕು. ರಾಜ್ಯದಲ್ಲಿ ವಿವಿಧ ಶಾಲೆಗಳಲ್ಲಿ ಶಿಕ್ಷಕರ ತರಬೇತಿಯನ್ನು ಪಡೆಯದೆ ಸುಮಾರು 4603 ಜನರು ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ. ಈ ಶಿಕ್ಷಕರು 2019 ಮಾರ್ಚ್ ಅಂತ್ಯದೊಳಗೆ ಡಿ.ಎಲ್.ಇಡಿ ತರಬೇತಿಯನ್ನು ಪಡೆಯಲು ಕಾಲಾವಕಾಶ ನೀಡಲಾಗಿದೆ.

ತರಬೇತಿ ರಹಿತವಾದ ಶಿಕ್ಷಕರಿಗೆ ಡಿ.ಎಲ್.ಇಡಿ ತರಬೇತಿಯನ್ನು ದೂರಸಂಪರ್ಕ ಕಾರ್ಯಕ್ರಮದ ಮೂಲಕ NIOS ಸಂಸ್ಥೆಯ ವತಿಯಿಂದ ತರಬೇತಿ ನೀಡಲು ಪ್ರಕ್ರಿಯೆ ಆರಂಭಿಸಿದೆ. 3165 ಜನರು ನೋಂದಣಿಯು ಕ್ರಮಬದ್ದವಾಗಿದೆ. ಇವರಿಗೆ ರಾಜ್ಯದಲ್ಲಿ 47 ಅಧ್ಯಯನ ಕೇಂದ್ರಗಳನ್ನು ಡಯಟ್ ಮತ್ತು ಬೆಂಗಳೂರು ನಗರದಲ್ಲಿ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಅನುದಾನಿತ ಬಿ.ಇಡಿ ಮತ್ತು ಡಿ.ಎಲ್.ಇಡಿ ಕಾಲೇಜುಗಳನ್ನು ಅಧ್ಯಯನ ಕೇಂದ್ರಗಳನ್ನಾಗಿಸಲಾಗಿದೆ.

ಈ ಕೋರ್ಸ್‌ಗೆ ಸಂಬಂಧಿಸಿದಂತೆ ಅಧ್ಯಯನ ಸಾಮಗ್ರಿಗಳು NIOS ಮತ್ತು D.S.E.R.T ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಭಾನುವಾರ ಮತ್ತು ರಜಾ ದಿನಗಳಲ್ಲಿ ಅಧ್ಯಯನ ಕೇಂದ್ರಗಳಲ್ಲಿ ಕಾಂಟ್ಯಾಕ್ಟ ತರಗತಿಗಳು ಆರಂಭವಾಗುವುವು. ಈ ಕಾರ್ಯಕ್ರಮದ ಉಸ್ತುವಾರಿಯನ್ನು ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ, ಪ್ರಾದೇಶಿಕ ನಿರ್ದೇಶಕರು, NIOS ಮತ್ತು D.S.E.R.T ಗಳ ಮಾರ್ಗದರ್ಶನದಲ್ಲಿ ನಡೆಸಲಾಗುತ್ತದೆ. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಡಯಟ್‌ಗಳನ್ನು ಸಂಪರ್ಕಿಸಬಹುದಾಗಿದೆ.

30/11/17
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,
ಬೆಂಗಳೂರು.